ಗಣಿಸದೆಯಿದ್ದಾಗ ಅಮ್ಮ ಆಜ್ಞಾಪಿಸುತ್ತಿದ್ದರು. ಆಗಲೂ ಅದನ್ನು ಅನುಸರಿಸುತ್ತಿದ್ದೆ ಎಂದೇನಿಲ್ಲ. ಆಗ ಮತ್ತೆ ಜೋರಾಗಿ ಒತ್ತಾಯಿಸಿ ಹೇಳುತ್ತಿದ್ದರು. ನಾನು ಏನಾದರೂ ವಿಕಾರವಾಗಿ ನುಡಿದು ಬಿಡುತ್ತಿದ್ದೆ. ಆಗ ಬೆನ್ನಿಗೆ ಏಟು ಬೀಳುತ್ತಿತ್ತು. ಇದೊಂದು ಸಾಮಾನ್ಯ ದೃಶ್ಯ.

ನೆರೆಮನೆಯ ಮಹಿಳೆಯರ ನಡುವೆ ಅಮ್ಮ ಗೌರವಕ್ಕೆ ಪಾತ್ರರಾಗಿದ್ದರು. ಕಾರಣ ಅಮ್ಮನ ಕೈಯಿಂದ ಹಣವೋ, ಅಕ್ಕಿಯೊ, ಸಾಲವೊ ಸಿಗುತ್ತಿತ್ತು. ತಕ್ಷಣಕ್ಕೆ ಅಗತ್ಯಕ್ಕಿರುವ ಹಣವನ್ನು ಸುಲಭವಾಗಿ ಪಡೆಯಲು ಅಮ್ಮನ ಸೇವೆ ಬೇಕು. ತಿಂಗಳು ತಿಂಗಳು ಆಯಮ್ಮನಿಗೆ ಎಷ್ಟು ಹಣ ಬರುತ್ತದೆ?, ಅವರು ಕೊಳಂಬೋದಲ್ಲಿ ಎಷ್ಟು ಹಣ ಬಾಚುತ್ತಾರೆ? ಹೀಗೆ ಸಾಗುತ್ತವೆ ಅಭಿಪ್ರಾಯಗಳು.

ಅಪ್ಪ ಬಹಳ ವರ್ಷಗಳಿಂದ ಸಿಲೋನಿನಲ್ಲಿರುತ್ತಿದ್ದರು. ತಿಂಗಳಿಗೊಮ್ಮೆ ಧಾರಾಳ ಹಣ ಕಳುಹಿಸುತ್ತಿದ್ದರು. ನಾವು ನಾಲ್ಕು ಜನ ಗಂಡು ಮಕ್ಕಳು. ಸಹೋದರಿಯರಾರೂ ಇಲ್ಲ. ಮತ್ತಿತರರ ಕಣ್ಣಲ್ಲಿ ಅದೊಂದು ಒಳ್ಳೆಯ ಅದೃಷ್ಟ. ಪಾರುವತ್ತೆಯ ಅಭಿಪ್ರಾಯದಲ್ಲಿ ಅದುವೇ ಬಹುದೊಡ್ಡ ಪುಣ್ಯ. ನಾನು ಯೋಚಿಸುತ್ತಿರುವುದು ಪಾರುವಮ್ಮನ ಮನೆಯಲ್ಲಿ ಬೆಳೆಯುತ್ತಿರುವ ಹೆಣ್ಣುಪಡೆ. ಆಯಮ್ಮನಿಗೆ ಐದು, ಅವರಿಗೆ ಏಳು. ಹೀಗೆ ಹದಿಮೂರು ಹೆಣ್ಣುಗಳು ತುಂಬಿದ ಒಂದು ಕುಟುಂಬವದು.ಒಂದು ಹೆಣ್ಣು ಮಗುವಿಗಾಗಿ ಅಮ್ಮ ಮತ್ತು ಅಪ್ಪ ಆಸೆಪಟ್ಟಿದ್ದರು. ಮೂರು ಗಂಡು ಮಕ್ಕಳ ಬಳಿಕ ಅಮ್ಮ ಗರ್ಭಿಣಿಯಾದಾಗ ಕಣಿಯ ಹೇಳಿದ್ದ, 'ಈ ಸಾರಿ ಹೆಣ್ಣು ಮಗುವೇ.' ಎಲ್ಲರಿಗೂ ಸಂತೋಷವಾಯಿತು. ಹೇಳದ ಹರಕೆಗಳಿಲ್ಲ. ಹೋಗದ ದೇವಸ್ಥಾನಗಳಿಲ್ಲ.ಆದರೆ, ನಿರೀಕ್ಷೆಗಳನ್ನೆಲ್ಲ ಅಡಿ ಮೇಲಾಗಿಸಿ ಒಂದು ಸಣಕಲ ಗಂಡು ಮಗು ಭೂಮಿಗೆ ಬಿತ್ತು. ವಿನಯಪೂರ್ವಕವಾಗಿ ನಿವೇದಿಸಿಕೊಳ್ಳಲೇ? ಆ ನಿರ್ಭಾಗ್ಯ ನಾನೇ.

ನನ್ನ ಜಾಗದಲ್ಲಿ ಒಂದು ಹೆಣ್ಣು ಮಗು ಹುಟ್ಟಬಹುದಿತ್ತು. ದೇವರನ್ನು ನಾನು ಶಪಿಸಿದ್ದು ಆ ಮೇಲಷ್ಟೆ. ಗುಂಡಿಗಳಿಲ್ಲದ ಮಾಸಿದ ಟ್ರೌಸರು ಧರಿಸಿ ವಿಕಾರವಾಗಿ ನಡೆದ ಆ ಕಾಲದಲ್ಲಿ ಅಂದು ನನಗೆ ಅಪ್ಪನ ನೆನಪಿರಲಿಲ್ಲ. ಅಪ್ಪನ ಪಟವನ್ನು ಕೋಣೆಯ ಹಲವೆಡೆಯಲ್ಲಿ ನೋಡಿದ್ದೇನೆ. ನನಗೆ ನಾಲ್ಕು ವರ್ಷ ಪ್ರಾಯವಾಗುವಾಗ ಅಪ್ಪ ಸಿಲೋನಿಗೆ ಹೋದವರು ಮತ್ತೆ ಮರಳಿ ಬರಲಿಲ್ಲ. ಅದನ್ನು ಕುರಿತು ಹೇಳಿದರೆ ಅಣ್ಣಂದಿರು ನನ್ನನ್ನು ಗೇಲಿ ಮಾಡುತ್ತಿದ್ದರು. ಅದರ ಮುಂದೆ ನಾನು ಮುದುಡಿ ಹೋಗುತ್ತೇನೆ. ಅವರು ಸಿಲೋನಿನಲ್ಲಿ ತುಂಬಾ ಕಾಲ ಕಳೆದಿದ್ದರು. ನನಗಿಂತಲೂ ಅಧಿಕಾರದಿಂದ ಅಪ್ಪನ ಕುರಿತು ಮಾತನಾಡುವವರೂ ಅವರೇ. ನಾನು ತಾಯ ಗರ್ಭದಲ್ಲಿದ್ದ ಸಂದರ್ಭದಲ್ಲಿ ತಾಯಿ ಮತ್ತು ಸಹೋದರರು ಊರಿಗೆ ಮರಳಿದರು. ಆ ಬಳಿಕ ವರ್ಷಕ್ಕೆ ಎರಡು ಮೂರು ತಿಂಗಳ ರಜೆಯಲ್ಲಿ ಅಪ್ಪ ಊರಿಗೆ ಬರುತ್ತಿದ್ದರು. ಅಮ್ಮನ ವತಿಯಿಂದ ನನಗೆ ಧಾರಾಳ ಪೆಟ್ಟುಗಳೂ ಸಿಗುತ್ತಿದ್ದವು. ನಡುವೆ ಅಣ್ಣಂದಿರೂ ಉಪದ್ರವ ಕೊಡುತ್ತಿದ್ದರು. ಒಂಟಿಯಾಗಿ ಕುಳಿತಿರುವಾಗ ನನ್ನ ದುರವಸ್ಥೆಯ ಬಗೆಗೆ ನೆನಪಾಗುತ್ತಿತ್ತು. ಮಗಳೊಬ್ಬಳ ಜಾಗದಲ್ಲಿ ನಾನು ಹುಟ್ಟಿದ್ದಕ್ಕಾಗಿರಬಹುದು. ನನ್ನೊಡನಿರುವ ಸಿಟ್ಟಿನಿಂದಾಗಿಯೇ ತಂದೆ ಊರಿಗೆ ಬಾರದೆ ಉಳಿದಿರಬಹುದೇ?

ರಾತ್ರಿ ಮಲಗುವಾಗ ಹಲವನ್ನು ಯೋಚಿಸುತ್ತಿದ್ದೆ. ನೆನೆನೆನೆದು ಕೊನೆಗೆ ಗೊತ್ತಿಲ್ಲದೆ ಕೇಳಿ ಬಿಡುತ್ತಿದ್ದೆ, 'ಅಮ್ಮಾ, ನಾನು ಹೆಣ್ಣಾಗಿದ್ದರೆ?', 'ಮಾತನಾಡದೆ ಮಲಗೋ.' ನಿದ್ದೆಗೆ ಜಾರುತ್ತಿದ್ದ ಅಮ್ಮ ಸಿಟ್ಟಿನಿಂದ ತೊಡೆಯನ್ನೊಮ್ಮೆ ಚಿವುಟುತ್ತಿದ್ದರು. ಒಂದು ಹೆಣ್ಣು ಮಗು ಆಗದೇ ಇರುವುದಕ್ಕೆ ಅಪ್ಪನಿಗೂ ಅಮ್ಮನಿಗೂ ನೋವಿದೆ. ಅದನ್ನು ನನ್ನಲ್ಲಿ ಹೇಳಿದ್ದೂ ಇದೆ. ತಂಗಿಯೊಬ್ಬಳಿರುವುದು ನಿಜವಾಗಿಯೂ ಒಳ್ಳೆಯದು. ನನ್ನ ಕ್ಲಾಸಿನ ಮಕ್ಕಳಿಗೆ ಅಕ್ಕಂದಿರೂ ತಂಗಿಯಂದಿರೂ ಇದ್ದಾರೆ. ಗೋಪಿಯ ಪುಸ್ತಕಗಳಿಗೆಲ್ಲ ಕ್ಯಾಲೆಂಡರುಗಳಿಂದ ಬೈಂಡು ಹಾಕಿಕೊಡುವುದು ಅವನ ಬಾನು ಅಕ್ಕನಂತೆ. ಅವನ ಬಾನು ಅಕ್ಕನೇ ಪುಸ್ತಕಗಳಲ್ಲಿ ಹೆಸರುಗಳನ್ನು ಬರೆದುಕೊಡುವುದು. ಎಂತಹ ಸುಂದರ ಅಕ್ಷರಗಳು. ಕರುಣಾಕರನ ದೊಡ್ಡ ಅಕ್ಕನ ಮದುವೆಯಿತ್ತು. ದೊಡ್ಡ ಮೀಸೆಯಿರುವ ಸ್ವಲ್ಪ ದೊಡ್ಡ ಗಾತ್ರದ ವಾಚು ಧರಿಸಿರುವ ವ್ಯಕ್ತಿಯೇ ಅವನ ಅಕ್ಕನನ್ನು ಮದುವೆಯಾದುದು. ಆತನ ಕುಟುಂಬದವರು ಮದುವೆ ಚಪ್ಪರಕ್ಕೆ ಬಂದು